ಓ ಎಸ್ ನಂ541/2022

ಪಿ. ಡಬ್ಲ್ಯೂ ಃ 1

**ದಿಃ 20.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎಂ ಸಿ ಜೆ ವಕೀಲರಿಂದ ಃ**

ನನಗೆ ಈ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ತಿಳಿದುಕೊಂಡು ಹಾಜರುಪಡಿಸಿರುತ್ತೇನೆ. ವೆಂಕಟಾಚಲಯ್ಯ ನವರು ಈ ದಾವೆಯಲ್ಲಿ ಸಲ್ಲಿಸಿರುವ ತಕರಾರನ್ನು ನಾನು ತಿಳಿದುಕೊಂಡಿರುತ್ತೇನೆ. ಮುನಿಗಂಗಮ್ಮ ನವರಿಗೆ ಈ ದಾವೆಯನ್ನು ಹೂಡಿದಾಗ 55 ವರ್ಷ ವಯಸ್ಸು ಆಗಿತ್ತು, ನನಗೆ ಆ ಸಮಯದಲ್ಲಿ 52 ವರ್ಷ ವಯಸ್ಸಾಗಿತ್ತು, ಈ ದಾವೆ ಸಲ್ಲಿಸುವಾಗ ಮುನಿಯಮ್ಮ ನವರಿಗೆ 40 ವರ್ಷ ವಯಸ್ಸು ಆಗಿತ್ತು.

ನಾನು ಮದುವೆಯಾದ ಸಮಯದಿಂದ ಕುರುಬರಹಳ್ಳಿಯಲ್ಲಿ ವಾಸವಾಗಿರುತ್ತೇನೆ. ಅದೇ ರೀತಿ ನನ್ನ ಅಕ್ಕ ಮತ್ತು ತಂಗಿಯವರು ಬೆಂಗಳೂರಿನಲ್ಲಿ ಅವರ ಮದುವೆಯಾದಾಗಿನಿಂದ ವಾಸವಿರುತ್ತಾರೆ ಎಂದರೆ ಸರಿ. ಈ ದಾವೆಯನ್ನು ನಾನು ವಿಭಾಗ ಕೋರಿ ಹಾಕಿರುತ್ತೇನೆ. ಈ ದಾವೆಯಲ್ಲಿ ಇರುವ ಎಲ್ಲ ಸ.ನಂಬರ್ ಗಳ ಚೆಕ್ ಬಂದಿಗಳು ನನಗೆ ಗೊತ್ತಿರುತ್ತವೆ.



ನನ್ನ ತಂದೆ ಮುನಿಚನ್ನಯ್ಯ ನವರು 1962 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡಾಗ ನನಗೆ 8 ಅಥವಾ 9 ವರ್ಷ ವಯಸ್ಸು ತುಂಬಿತ್ತು. 1962 ರಲ್ಲಿ ನನ್ನ ತಂದೆ ತೀರಿಕೊಂಡಾಗ ನಾನು ಹುಟ್ಟಿದ್ದೆ. ನನಗೂ ಮತ್ತು ನನ್ನ ತಂಗಿಯರಿಗೆ ಯಾವ ವರ್ಷದಲ್ಲಿ ಮದುವೆಯಾಗಿರುತ್ತದೆ ಎಂದು ನನಗೆ ನೆನಪಿಲ್ಲ. ನಾನು ಹುಟ್ಟಿ ನಂತರ ಈ ದಾವಾ ಸ್ವತ್ತಿನ ಬಗ್ಗೆ ಮಾಹಿತಿ ಇರುತ್ತದೆ. ನಾವು ವಯಸ್ಕರಾದ ಮೇಲೆ ದಾವಾ ಸ್ವತ್ತುಗಳ ಮೇಲೆ ಯಾವುದೇ ದಾವೆಗಳನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಈ ದಾವೆಯನ್ನು ಬಿಟ್ಟು ಬೇರೆ ಯಾವುದು ದಾವೆಯನ್ನು ದಾಖಲು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಈ ಹಿಂದೆ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಮತ್ತು ವಾದಪತ್ರದಲ್ಲಿ ಹೇಳಿರುತ್ತೇನೆ. ನಾನು ಆ ರೀತಿಯಾಗಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳು ನನ್ನ ತಾತ ಚನ್ನಪ್ಪ ನವರಿಗೆ ಸೇರಿದ ಸ್ವತ್ತುಗಳಾಗಿರುತ್ತವೆ, ನನ್ನ ತಾತನ ಹೆಸರು ಚನ್ನಪ್ಪ ಮತ್ತು ನನ್ನ ಅಜ್ಜಿಯ ಹೆಸರು ಲಕ್ಕಪ್ಪ ಆಗಿರುತ್ತದೆ. ಚನ್ನಪ್ಪ ಮತ್ತು ಲಕ್ಕಮ್ಮ

ನವರಿಗೆ 3 ಜನ ಮಕ್ಕಳಿರುತ್ತಾರೆ. ಅವರಿಗೆ ವೆಂಕಟಪ್ಪ, ಗಂಗಯ್ಯ ಮತ್ತು ಮುನಿಚನ್ನಯ್ಯ ಎಂದು ಮಕ್ಕಳಿರುತ್ತಾರೆ. ವೆಂಕಟಪ್ಪ, ಗಂಗಯ್ಯ ಮತ್ತು ಮುನಿಚನ್ನಯ್ಯ ನವರು ವಿಭಾಗ ಮಾಡಿಕೊಂಡಿರುವುದಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ, ಅವರು ಬೇರೆ ಬೇರೆಯಾಗಿ ಅನುಭವಿಸಿಕೊಂಡು ಇರುತ್ತಾರೆ.

ನಾನು ದಾವೆ ಸಲ್ಲಿಸುವ ಸಮಯದಲ್ಲಿ ದಾವಾ ಆಸ್ತಿಗಳ ಖಾತೆ ಪ್ರತಿವಾದಿ1 ಮತ್ತು 2 ರವರ ಹೆಸರಿನಲ್ಲಿತ್ತು ಎಂದರೆ ಸರಿ. ನಾನು ದಾವೆ ಸಲ್ಲಿಸಿದ ಮೇಲೆಯೂ ಕೂಡ ಎಲ್ಲ ಖಾತೆಗಳು ಪ್ರತಿವಾದಿ 1 ಮತ್ತು 2 ರವರ ಹೆಸರಿನಲ್ಲಿ ಈಗಲೂ ಇದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**